

### ವ್ಯತ್ಯಾಸವೇನು?

ಗುಂಡ: ನಿನಗೆ ಸ್ವಿಮಿಂಗ್ ಬರುತ್ತಾ?

ಭಂಡ: ಇಲ್ಲ.

ಗುಂಡ: ನಿನಗಿಂತ ನಮ್ಮ ನಾಯಿಮರಿನೇ ವಾಸಿ; ಅದು ನೀರಿನಲ್ಲಿ ಚೆನ್ನಾಗಿ ಈಜುತ್ತೆ.

ಭಂಡ: ನಿನಗೆ ಈಜಾಡೋಕ್ಕೆ ಬರುತ್ತಾ?

ಗುಂಡ: ಬರುತ್ತೆ.

ಭಂಡ: ಹಾಗಿದ್ದ ಮೇಲೆ ನಿನಗೂ ಆ ನಾಯಿಮರೀಗೂ ಇರುವ ವ್ಯತ್ಯಾಸವೇನು?

★★★

### ಛಲ ಬಿಡದ ತ್ರಿವಿಕ್ರಮ

ಒಂದು ಮೊಲ ಪ್ರತಿದಿನ, ಕಮ್ಮಾರನ ಬಳಿಗೆ ಬಂದು, 'ಕ್ಯಾರೆಟ್ ಇದೆಯಾ?' ಎಂದು ಆತನನ್ನು ಕೇಳುತ್ತಿತ್ತು.

ಆ ಕಮ್ಮಾರ, ಶಾಂತ ದನಿಯಿಂದ, 'ಇಲ್ಲ' ಎಂದು ಹೇಳಿ, ತನ್ನ ಕೆಲಸದಲ್ಲಿ ತಾನು ತೊಡಗಿಕೊಳ್ಳುತ್ತಿದ್ದ. ಆದಾಗ್ಯೂ ಆ ಮೊಲ 'ಛಲ ಬಿಡದ ತ್ರಿವಿಕ್ರಮ'ನಂತೆ ಮಾರನೆಯ ದಿವಸವೂ ಬಂದು ಅದೇ ಪ್ರಶ್ನೆಯನ್ನು ಕೇಳಿತು. ಪ್ರತಿದಿನ ಅದರದ್ದು ಇದೇ ಪ್ರಶ್ನೆ;

ಆತನದ್ದು ಅದೇ ಉತ್ತರ!

ಮೊಲದ ಪ್ರತಿದಿನದ ಈ ಕೆಲಸದಿಂದ ಬೇಸತ್ತು ರೋಸಿಹೋದ ಆ ಕಮ್ಮಾರ ಒಂದುದಿನ ಆ ಮೊಲ ಬಂದಾಗ ಅದರ ಕತ್ತಿಗೆ ಕೈ ಹಾಕಿ ಅದನ್ನು ಹಿಡಿದುಕೊಂಡು, ಅದರ ಮುಂದಿನ ಹಲ್ಲುಗಳನ್ನು ತನ್ನ ಬಳಿ ಇದ್ದ ಸುತ್ತಿಗೆಯಿಂದ ಚಚ್ಚಿ ಮುರಿದು ಹಾಕುತ್ತಾ,

'ನನ್ನಗಂದೇ. ಈಗ ನೀನು ಕ್ಯಾರೆಟನ್ನು ಅದ್ಹೇಗೆ ತಿಂತೀಯೋ ನಾನು ನೋಡ್ತೀನಿ', ಎಂದು ಅದಕ್ಕೆ ಚಾಲೆಂಜ್ ಹಾಕಿದ.

ಮಾರನೆಯ ದಿವಸ ಆ ಮೊಲ ಮತ್ತೆ ಆತನ ಬಳಿ ಬಂದು, 'ಅಂಕಲ್! ಕ್ಯಾರೆಟ್ ಹಲ್ವಾ ಇದೆಯಾ?' ಎಂದು ಕೇಳಿತು!

★★★

### ವರನೇ?

ತರುಣಿಯೊಬ್ಬಳ ವಿವಾಹಕಾಲದಲ್ಲಿ ಕಲ್ಯಾಣ ಮಂಟಪಕ್ಕೆ ಆಕೆಯ ಮಾಜಿ ಬಾಯ್ ಫ್ರೆಂಡ್, ಥೇಟ್ ವರನಂತೆಯೇ ಅಲಂಕಾರ ಮಾಡಿಕೊಂಡು ಬಂದಿದ್ದ! ಮದುವೆಗೆ ಬಂದಿದ್ದ ಬಾಲಕನೊಬ್ಬ ಆತನನ್ನೆ ಗುರಾಯಿಸಿಕೊಂಡು ನೋಡುತ್ತಾ 'ನೀವು ವರಾನಾ?!' ಎಂದು ಕುತೂಹಲ ಹಾಗೂ ಅಚ್ಚರಿಯಿಂದ ಪ್ರಶ್ನಿಸಿದ.

ವಧುವಿನ ಮಾಜಿ ಬಾಯ್ ಫ್ರೆಂಡ್: ಇಲ್ಲಾ ಪುಟ್ಟಾ. ನಾನು ಸೆಮಿಫೈನಲ್ಸ್‌ನಲ್ಲಿ ಎಲಿಮಿನೇಟ್ ಆದೆ; ಈಗ ಫೈನಲ್ಸ್ ನೋಡೋಣಾಂತ ಬಂದಿದ್ದೀನಿ.

(ಸಂಗ್ರಹ) **ಕೆ.ಜಯಮ್ಮ, ಕಲ್ಲಹಳ್ಳಿ, ಮಂಡ್ಯ**

---

## ಸಮುದ್ರ ಮಥನ




### ಮನ ಕಲಕಿತು

'ನಂದಿ ಹೋದ ನಂದಿತಾ' ಚಂದ್ರಹಾಸ ಹಿರೇಮಳಲಿ/ ನೃಪತುಂಗ ಎಸ್.ಕೆ. ಅವರ ಮುಖಪುಟ (ಸುಧಾ, ಡಿ. 4) ಲೇಖನ ವಿವರವಾದ ಮಾಹಿತಿ ನೀಡಿತು. ತೀರ್ಥಹಳ್ಳಿಯ ಅಮಾಯಕ ಬಾಲಕಿಯ ದುರಂತ ಸಾವಿನ ಕುರಿತ ಸಚಿತ್ರ ಲೇಖನ ಓದುಗರ ಮನಕಲಕಿತು.

-ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ, ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ, ಎಂ.ಜಿ. ರಾಮಚಂದ್ರ, ಮಂಡಗಳಲೆ, ಮೇ.ಗೋ. ಸುಬ್ಬಣ್ಣ,ಮೇಗರವಳ್ಳಿ, ಮುಕುಂದ ಹೆರಕಲ್ಲ, ಗುಲ್ಬರ್ಗ, ಎಸ್ಸೆನ್ಕೆ, ಕಡೂರು, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಕಣ್ತೆರೆಸುವಂತಿದೆ

ಡಾ.ಗುರುರಾಜ ಕರಜಗಿ ಅವರ ಲೇಖನ 'ಹೆತ್ತವರ ಜವಾಬ್ದಾರಿ ಏನು?' ಪಾಲಕರ ಕಣ್ತೆರೆಸುವಂತಿದೆ.

-ಹೇಮಾ ಸುಬ್ರಹ್ಮಣ್ಯ, ಕೋಣಂದೂರು

### ಬೆಚ್ಚಿಬೀಳಿಸಿತು

ನಂದಿತಾ ಕುರಿತ ಲೇಖನ ಓದಿ ಬೆಚ್ಚಿಬೀಳುವಂತಾಯಿತು. ನಂದಿತಾಳ ದುರಂತ ಸಾವಿಗೆ ಕೊನೆಗೂ ಸರಿಯಾದ ಕಾರಣ ಸಿಗದೇ ಇರುವುದು ವಿಷಾದನೀಯ.

- ಸು. ವಿಜಯಲಕ್ಷ್ಮೀ, ಶಿವಮೊಗ್ಗ

### ಬಿಂಬಿಸಿದ್ದು ಸರಿಯಲ್ಲ

ಈ ಲೇಖನ ಓದಿದ ಯಾರಿಗೂ ಕರುಳು ಚುರುಕ್ ಎನ್ನದೇ ಇರದು. ಆದರೆ ತನಿಖೆ ಪೂರ್ಣಗೊಳ್ಳದೇ ನಂದಿತಾಳನ್ನು ಮುಗ್ಧ ಹುಡುಗಿ ಎಂದು ಬಿಂಬಿಸಿರುವುದು ಸರಿಯಲ್ಲ. – ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ಅರ್ಥಪೂರ್ಣ

'ನಿಮ್ಮೊಡನೆ' ಅಂಕಣದಲ್ಲಿ ರಘುನಾಥ ಚ.ಹ. ಅವರು ಬರೆದ 'ಬೆರಳ ತುದಿಯಲ್ಲಿ ವಿಶ್ವ ಮತ್ತು ವಿವೇಕ' ಸಮಯೋಚಿತ ಹಾಗೂ ಅರ್ಥಪೂರ್ಣವಾಗಿದೆ.

–ಶ್ರೀನಾಥ್ ಕೊನೇಟಿ, ಬೆಂಗಳೂರು

### ಉಪವಾಸ–ಉಪಯೋಗ

'ಉಪವಾಸ ಹೀಗೂ ಮಾಡಬಹುದು!' (ಎಸ್.ಎಂ. ಶಶಿಧರ್) ಆರೋಗ್ಯ ಲೇಖನ ಪ್ರಸ್ತುತವಾಗಿತ್ತು. ಉಪವಾಸದಿಂದ ದೇಹಕ್ಕೆ ಎಷ್ಟೊಂದು ಉಪಯೋಗವೆಂಬುದರ ಬಗ್ಗೆ ಲೇಖಕರು ಸಾಕಷ್ಟು ತಿಳಿಸಿದ್ದಾರೆ.

–ಪುಟ್ಟಗೌರಿ ಚಿದಾನಂದ ಕಳಸಮ್ಮ, ಗುಲ್ಬರ್ಗ, ಓಂಟನ್ನೇಶ್ ಅರಬಿಳಚಿಕ್ಯಾಂಪ್, ರವೀಂದ್ರನಾಥ. ಶಿ. ಯಡಹಳ್ಳಿ, ಬಾಗಲಕೋಟ

### ಸಚಿತ್ರ ಪ್ರವಾಸ ಕಥನ

ವಿ. ಪ್ರದೀಪ್ ಕುಮಾರ್‌ರವರ ಪ್ರವಾಸ ಲೇಖನ 'ಟೈಮ್ಸ್ ಸ್ಕ್ವೇರ್' ಸೊಗಸಾಗಿತ್ತು. ಸಚಿತ್ರ ಬರಹ ಓದಿದಾಗ ಅದರ ಆಸುಪಾಸುಗಳಲ್ಲಿ ನಡೆದಾಡಿದ ಅನುಭವವಾಯಿತು. –ಸುಂದರ್, ಬೆಂಗಳೂರು

### ಎಳೆಯರ ಕಥೆ ಚೆನ್ನಾಗಿದೆ

'ಎಳೆಯರ ಅಂಗಳ'ದಲ್ಲಿ ಪ್ರಕಟವಾದ 'ಹಣ ಮತ್ತು ಗುಣ' ನೀತಿ ಕತೆ ಚೆನ್ನಾಗಿದೆ. ಕಥೆ ಪುಟದಲ್ಲಿ ಸಮುದ್ರವಳ್ಳಿ ವಾಸು ಅವರು ಬರೆದ ಹನಿಗವನ 'ಬಾಚು–ಚಾಚು' ಕೂಡ ಚೆನ್ನಾಗಿದೆ.

–ಅಕ್ಷಯನಗರ ಗೋಪಾಲರಾವ್, ಬೆಂಗಳೂರು

### ನಾವೀನ್ಯ ಕಥೆ

ಟಿ. ತಿಮ್ಮಪ್ಪನವರ 'ಅಯ್ಯಯ್ಯೋ ದೆವ್ವ...' ಕಥೆಯ ವಸ್ತು ಹಳೆಯದಾದರೂ ಇದರಲ್ಲಿಯ ನಾವೀನ್ಯ, ಗಟ್ಟಿತನದ ಜೊತೆಗೆ ಉತ್ತಮ ನಿರೂಪಣೆಯೊಂದಿಗೆ ಕಥೆ ಅದ್ಭುತವಾಗಿದೆ. –ಕೊಹಿಮ, ಬಸರಕೋಡು

### ವಿಡಂಬನಾತ್ಮಕ ಕಥೆ

'ಅಯ್ಯಯ್ಯೋ ದೆವ್ವ' ಕಥೆ ವಿಡಂಬನಾತ್ಮಕವಾಗಿದೆ. ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯದ ಅನೇಕ ರೀತಿಗಳಲ್ಲಿ ಇದೂ ಒಂದು ಎನ್ನಬಹುದು.

–ಎಸ್. ವಿಜಯಕುಮಾರಿ, ಬೆಂಗಳೂರು

### ಕಂಬಳ ನಿಷೇಧ ಸಲ್ಲ

ಕರಾವಳಿ ಎಂದೊಡನೆ ಮನಃಪಟಲದ ಮುಂದೆ ಬರುವ ಚಿತ್ರಣ, ಕಂಬಳ, ಕೋಲ, ಯಕ್ಷಗಾನ, ಉಡುಪಿ ಕೃಷ್ಣ, ಧರ್ಮಸ್ಥಳ ಇತ್ಯಾದಿ. ಈ ಕಲಾ ಪ್ರಕಾರಗಳು ಶತ ಶತಮಾನಗಳಿಂದ ಆಚರಣೆಯಲ್ಲಿದ್ದು ಪ್ರಾಣಿಗಳನ್ನು ಮುದ್ದಿಸುವುದಕ್ಕೆ ಹೊರತು ಪ್ರಾಣಿ ಹಿಂಸೆಗಲ್ಲ. ಬಾರುಕೋಲುಗಳ ಬಳಕೆಯೆಂದರೆ ದಬ್ಬೆ ಮೈಯಿನ ಕೋಣಗಳಿಗೆ ಚುರುಕು ಮುಟ್ಟಿಸುವುದಾಗಿದೆ. ಈ ಕಲಾ ಪ್ರಕಾರ ರದ್ದು ಮಾಡಿದ್ದು ಸರಿಯಲ್ಲ.

–ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ರಾಜೀವ ಎಸ್. ಮಾಗಲ್, ಸಕಲೇಶಪುರ